ಕುದುರೇಮುಖ ಐರನ್ ಓರ್ ಕಂಪನಿ ಸಂಸ್ಥೆ (ಕೆಐಒಸಿಎಲ್)ಯು

1245.47 ಲಕ್ಷರೂ.ಬಾಕಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು

(ಇದು ಪ್ರಗತಿಯಲ್ಲಿದೆ) 1245.47

67631.51

ಅಥವಾ 676.31 ಕೋಟಿ ರೂ.

ಗ್ರಾಮಾಂತರ ಪ್ರದೇಶದ ಬಡಜನರಿಗೆ ಹಸಿರು ಕಾರ್ಡ್

167 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಭಾಗದ ಬಡಜನರಿಗೆ ಇನ್ನೂ ಸಾಕಷ್ಟು ಹಸಿರು ಕಾರ್ಡುಗಳು ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದರ ಸಲುವಾಗಿ ಏನು ಕ್ರಮ ಕೈಗೊಳ್ಳಲಾಗುವುದು?

ಇ) ಬೀಳಗಿ ಮತಕ್ಷೇತ್ರ ಸಾಕಷ್ಟು ಹಿಂದುಳಿದ ಪ್ರದೇಶವಿದ್ದು, ಅಲ್ಲಿಯಜನರಿಗೆ ಹಸಿರು ಕಾರ್ಡು ವಿತರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಲಾಗುವುದೇ?

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು

ಆ) ಈಗಾಗಲೇ ವಿತರಿಸಿರುವ ತ್ರಿವರ್ಣ ಪಡಿತರ ಚೀಟಿಗಳನ್ನು ಮಹಾತ್ಮಗಾಂಧೀಜಿಯವರ ಭಾವಚಿತ್ರವಿರುವ ಹಸಿರು ಪಡಿತರ ಚೀಟಿಗಳಿಗೆ ಬದಲಾಯಿಸಿ ಕೊಡುವ ಕಾರ್ಯಕ್ರಮವನ್ನು ನವೆಂಬರ್ 1995ನೇ ಮಾಹೆಯಲ್ಲಿ ಹಮ್ಮಿಕ್ಕೊಳ್ಳಲಾಗಿದೆ, ಹಾಗೆ ಬದಲಾಯಿಸಿಕೊಡುವಾಗ ಬಿಟ್ಟುಹೋಗಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಹಂತ-ಹಂತವಾಗಿ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಇ) ಬೀಳಗಿಯು ಸೇರಿದಂತೆ ರಾಜ್ಯದ ಎಲ್ಲೆಡೆ, ಇನ್ನೂ ಹಸಿರು ಪಡಿತರ ಚೀಟಿ ನೀಡಬೇಕಾದಂತಹ ಅರ್ಹ ಫಲಾನುಭವಿಗಳನ್ನು ಗುರುತಿಸಿ ಹಸಿರು ಪಡಿತರ ಚೀಟಿಗಳನ್ನು 1995ನೇ ನವೆಂಬರ್ ತಿಂಗಳಲ್ಲಿ ವಿತರಿಸುವ ಕಾರ್ಯವನ್ನು ಹಮ್ಮಿಕೊಂಡಿದೆ.

1995-96ನೇ ಸಾಲಿನಲ್ಲಿ ಮಂಜೂರಾದ ಪಶು ವೈದ್ಯಶಾಲೆಗಳು

168 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಬಿಜಾಪುರ ಜಿಲ್ಲಾ ಬೀಳಗಿ ಮತಕ್ಷೇತ್ರಕ್ಕೂ ಹೊಸದಾಗಿ ಯಾವ ಆಸ್ಪತ್ರೆಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ?*

ಇ) *ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೀಳಗಿ ಮತಕ್ಷೇತ್ರದಲ್ಲಿ ವಿದ್ಯುತ್ ಅಭಾವ

170 - ಶ್ರೀ ಬಿ.ಜೆ. ಪಾಟೀಲ್ (ಬೀಳಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀಳಗಿ ಮತಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಕಳೆದ ಹಲವಾರು ವರ್ಷಗಳಿಂದ ವಿದ್ಯುಚ್ಛಕ್ತಿ ಅತೀವ ಅಸಮರ್ಪಕವಾಗಿ ಪೂರೈಕೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಈಗಾಗಲೇ ಅಲ್ಲಿ 33 ಕೆ.ವಿ.ಸ್ಟೇಷನ್ ಮಂಜೂರು ಮಾಡಲಾಗಿದ್ದು 1995-96ನೇ ಸಾಲಿನಲ್ಲಿ ಸದರಿ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ*

ಇ) *ಈಗಾಗಲೇ ಜಮಖಂಡಿ ಬಿಜಾಪುರದವರೆಗೆ 220 ಲೈನ್ ಮಂಜೂರಾಗಿದ್ದು ಸಾವಳಗಿ 33 ಕೆವಿ ಸ್ಟೇಷನ್ ಬದಲಾಗಿ ಇದೇ ಸಾಲಿನಲ್ಲಿ 110 ಕೆವಿ. ಸ್ಟೇಷನ್ ಪ್ರಾರಂಭಿಸಬೇಕು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು, ಗಮನಕ್ಕೆ ಬಂದಿದೆ.

ಆ) ಸಾವಳಗಿಯಲ್ಲಿ ಒಂದು 33:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ ನಿರ್ಮಾಣಕ್ಕೆ ಮಂಡಳಿಯ ತಾಂತ್ರಿಕ ಸಮಿತಿಯು ಜನವರಿ 94ರಲ್ಲಿ ಅನುಮೋದನೆ ನೀಡಿದೆ. ಆದರೆ ಇಲ್ಲಿ 33:11 ಕೆ.ವಿ. ಸಬ್-ಸ್ಟೇಷನ್ ಬದಲಾಗಿ 110:33:11 ಕೆ.ವಿ. ಸಬ್-ಸ್ಟೇಷನನ್ನು ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.ಕ ಆದ್ದರಿಂದ 33:11 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣದ ಕಾರ್ಯವನ್ನು ಕೈಗೊಂಡಿಲ್ಲ.

ಇ) ಸವಳಗಿಯಲ್ಲಿ 110 ಕೆವಿ ಸ್ಟೇಷನ್ ನಿರ್ಮಾಣದ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸಾಗುತ್ತಿದೆ. ಪರಿಶೀಲನೆಯ ನಂತರ ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಿ, ಮಂಡಳಿಯ ತಾಂತ್ರಿಕ ಸಮಿತಿಯ ನಿರ್ಧಾರದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.